## ಕೇರಳ ರಾಜ್ಯಕ್ಕೆ ಆಹಾರ ಧಾನ್ಯಗಳ ಕಳ್ಳಸಾಗಾಣಿಕೆ

೫೦೪. ಶ್ರೀಮತಿ ಸುಮಾ ವಸಂತ (ವಿರಾಜಪೇಟೆ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯೆಯಿಟ್ಟು ಉತ್ತರಿಸುವರೆ ?

ಅ) ವಿರಾಜಪೇಟೆ ಕ್ಷೇತ್ರದಿಂದ ಕೇರಳಕ್ಕೆ ಈವರೆಗೆ ಅಕ್ಕಿ, ಎಣ್ಣೆ ಇತ್ಯಾದಿ ಕಳ್ಳಸಾಗಾಣಿಕೆ ಆದ ಬಗ್ಗೆ ದಾಖಲಾತಿಯಾದ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಈ ಬಗ್ಗೆ ಯಾವ ಯಾವ ತನಿಖಾ ಠಾಣೆಗಳಲ್ಲಿ ಎಷ್ಟೆಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಹಾಗೂ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ೧೫ ಪ್ರಕರಣಗಳು.

ಆ) ಎಲ್ಲ ೧೫ ಪ್ರಕರಣಗಳನ್ನು ಮಾಕೂಟ್ಟ ತನಿಖಾ ಠಾಣೆಯಲ್ಲಿ ಪತ್ತೆ ಹಚ್ಚಲಾಗಿದೆ. ೧೩ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕಿತ್ತಿವೆ. ೨ ಪ್ರಕರಣಗಳು ನ್ಯಾಯಾಲಯದಲ್ಲಿ ತೀರ್ಮಾನವಾಗಿರುತ್ತವೆ.

ಶ್ರೀಮತಿ ಸುಮಾವಸಂತ.— ಸುಮಾರು ಎರಡು ತಿಂಗಳಿನಿಂದ ಫಾಮಾಯಿಲ್ ತುಂಬಾ ಸ್ಮಗಲ್ ಆಗುತ್ತಿದೆ ಎಂದು ತಿಳಿದಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಜಿ. ಬಸವಣ್ಣಪ್ಪ.—ಈಗ ನಮ್ಮ ರಾಜ್ಯದ ಜನತೆಗೆ ಬೇಕಾಗುತಕ್ಕದ್ದು ಒಂದು ಲಕ್ಷ ೮೦ ಸಾವಿರ ಕಿಲೋ ಲೀಟರ್ ಎಣ್ಣೆ. ಆದರೆ ಉತ್ಪಾದನೆಯಾಗುವುದು ಒಂದು ಲಕ್ಷ ೨೦ ಸಾವಿರ ಕಿಲೋ ಲೀಟರ್. ಅಂದಾಗ ೬೦ ಸಾವಿರ ಕಿಲೋಲೀಟರ್ ಎಣ್ಣೆಯ ಕೊರತೆ ಇದೆ. ಕೇಂದ್ರ ಸರ್ಕಾರ ಕಳುಹಿಸಿದ ಎಣ್ಣೆಯನ್ನು ನಾವು ವಿತರಣೆ ಮಾಡುತ್ತಿದ್ದೇವೆ. ವಿತರಣೆ ಮಾಡುವಾಗ ಎಷ್ಟು ಬೇಕೋ ಅಷ್ಟನ್ನು ಕೊಡಬೇಕಾಗುತ್ತದೆ. ಆದರೆ ಎಣ್ಣೆಯ ಪ್ರಮಾಣ ಕಡಿಮೆ ಇರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಲ್ಪ ಕೊರತೆ ಇದೆ. ಆ ಕೊರತೆಯನ್ನು ಭರ್ತಿ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ

ಶ್ರೀಮತಿ ಸುಮಾವಸಂತ.— ಸಹಕಾರ ಸಂಘಗಳ ಮೂಲಕ ವಿತರಣೆಯಾಗತಕ್ಕ ಫಾಮಾಯಿಲ್ ಸ್ಮಗಲ್ ಆಗುತ್ತಿದೆ. ನೀವು ಅದನ್ನು ವಿತರಣೆ ಮಾಡುವುದು ಕಾರ್ಡ್ ಇದ್ದವರಿಗೆ ಮಾತ್ರ ತಾನೇ ? ಸ್ಮಗಲ್ ಆಗಬೇಕಾದರೆ ಸೊಸೈಟಿ ಮೂಲಕವೇ ಆಗಿರಬೇಕಲ್ಲವೆ ?

ಶ್ರೀ ಜಿ. ಬಸವಣ್ಣಪ್ಪ.— ನಾವು ಅದನ್ನು ಕಾರ್ಡ್ ಮೂಲಕವೇ ವಿತರಣೆ ಮಾಡುವುದು. ಯಾರು ಪಡಿತರ ಚೀಟಿಯನ್ನು ಹೊಂದಿರುತ್ತಾರೋ ಅವರಿಗೆ ಮಾತ್ರ ಕೊಡುತ್ತೇವೆ.

## ಕರ್ನಾಟಕ ವಿಜ್ಞಾನ ಪರಿಷತ್ತಿನ ಚಟುವಟಿಕೆಗಳು

೨೪೨. ಶ್ರೀ ಟಿ. ಎಸ್. ಮಣಿ (ಕೆ. ಜಿ. ಎಫ್.).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿ ದಯೆಯಿಟ್ಟು ಉತ್ತರಿಸುವರೆ ?

ಅ) ಹಿಂದಿನ ೫ ವರ್ಷಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿಗೆ ನೀಡಿರುವ ಧನಸಹಾಯವೆಷ್ಟು ? ಹಾಗೂ ಪ್ರಸಕ್ತ ಆಯವ್ಯಯ ವರ್ಷದಲ್ಲಿ ನೀಡಲು ಉದ್ದೇಶಿಸಿರುವ ಧನಸಹಾಯವೆಷ್ಟು ?

ಆ) ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಹೊಂದಿರುವ ಪ್ರಾಥಮಿಕ ಘಟಕಗಳ ಮತ್ತು ಸದಸ್ಯರ ಸಂಖ್ಯೆ ಎಷ್ಟು ?

ಇ) ಕಳೆದ ೫ ವರ್ಷಗಳಲ್ಲಿ ಈ ಘಟಕಗಳಲ್ಲಿ ಹಾಗೂ ಸದಸ್ಯರ ಸಂಖ್ಯೆಯಲ್ಲಿ ಆಗಿರುವ ಬೆಳವಣಿಗೆ ಏನು ?

ಈ) ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಒಂದು ವಿಜ್ಞಾನ ಚಳುವಳಿಯಾಗಿ ರೂಪಗೊಳ್ಳಲು ಸರ್ಕಾರದವರು ಕ್ರಮಗಳನ್ನು ಕೈಗೊಳ್ಳುವರೆ ?